ಭಿನ್ನಮತೀಯರನ್ನು ಸೈಬೀರಿಯಾಕ್ಕೆ ಗಡೀಪಾರು ಮಾಡಿ ಶ್ರಮಿಕ ಬಿಡಾರಗಳತ್ತ ಅಟ್ಟಿದ್ದೂ ಚರಿತ್ರೆಯ ಭಾಗವೇ. ಮುಂದೆ ಬೋಲ್ಷೆವಿಕ್ ಕ್ರಾಂತಿಯ ನಂತರ ಕಮ್ಯುನಿಸ್ಟ್ ಸರ್ಕಾರ ಬಂದರೂ, ಸೈಬೀರಿಯಾದ ಸ್ವಾಮಿತ್ವ ಬದಲಾಯಿತೇ ಹೊರತು ಅದರ ಪ್ರತೀಕ ಬದಲಾಗಲಿಲ್ಲ. ಲೆನಿನ್ ಮತ್ತು ಸ್ಟಾಲಿನ್‌ರ ಆಳ್ವಿಕೆಯಲ್ಲಿ ರಾಜಕೀಯ ವಿರೋಧಿಗಳು ಮತ್ತು ಭಿನ್ನಮತೀಯರನ್ನು ದೈಹಿಕ ಶ್ರಮದ ಶಿಕ್ಷೆಯೊಂದಿಗೆ ಸೈಬೀರಿಯಾಕ್ಕೆ ಕಳುಹಿಸುತ್ತಿದ್ದ ಪ್ರಕ್ರಿಯೆ ಮುಂದುವರೆಯಿತು. ಈ ದೈಹಿಕ ಶ್ರಮದ ಬಿಡಾರಗಳನ್ನು 'ಗುಲಾಗ್' ಎಂದು ಕರೆಯತ್ತಿದ್ದರು. ಅಲೆಕ್ಸಾಂಡರ್ ಸೋಲ್ಜನಿಸ್ಟಿನ್ ಈ ಬಿಡಾರಗಳನ್ನು ಒಂದು ದ್ವೀಪಸಮೂಹದಂತೆ ಕಂಡಿದ್ದ. ಹೀಗಾಗಿ, ಅವನ ಪುಸ್ತಕವನ್ನು 'ದ ಗುಲಾಗ್ ಆರ್ಚಿಪಲಾಗೊ' ಎಂದು ಕರೆದಿದ್ದ. ಸೈಬೀರಿಯಾದ ಭೂಖಂಡಕ್ಕೆ ನಿಖರವಾದ ಸರಹದ್ದುಗಳಿಲ್ಲ. ಚೆಕಾಫ್ ಆ ಸೈಬೀರಿಯಾದ ವಿಸ್ತೀರ್ಣವನ್ನು ವಿವರಿಸುತ್ತಾ 'ಅದು ಎಕ್ಟಾರಿನ್‌ಬರ್ಗ್‌ನಲ್ಲಿ ಪ್ರಾರಂಭವಾಗಿದ್ದು ಎಲ್ಲಿ ಮುಗಿಯುವುದೋ ದೇವರೇ ಬಲ್ಲ' ಎಂದಿದ್ದನಂತೆ.

ಇಂಥದ್ದೊಂದು ಯಾತನೆಯ ಪ್ರಾಂತದಲ್ಲಿ ಪಿಯಾನೊಗಳನ್ನು ಹುಡುಕುವ ಯಾನವನ್ನು ಸೋಫಿ ರಾಬರ್ಟ್ಸ್ ಕೈಗೊಳ್ಳುತ್ತಾರೆ. ಮೊದಲಿಗೆ ಆಕೆಯ ಗೆಳತಿ ಆಡ್ಗೆರೆಲ್‌ಗಾಗಿ ಒಂದು ಪಿಯಾನೊ ಕೊಳ್ಳಬೇಕೆನ್ನುವ ಪ್ರಸ್ತಾಪವನ್ನವರು ಚರ್ಚಿಸುತ್ತಾರೆ. ಹೀಗೆ ಖರೀದಿಗೆಂದು ಅವರ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ಸಭೆಗಳಲ್ಲಿ ನುಡಿಸಲು ಉಪಯೋಗಿಸುವ ಪಿಯಾನೊಗಳಿಗಿಂತ ಆಪ್ತ ಸ್ಥಳಗಳಲ್ಲಿ ನುಡಿಸಬಹುದಾದ ಸ್ಥಳೀಯವಾಗಿ ತಯಾರಿಸಿದ ಪಿಯಾನೊವನ್ನು ಹುಡುಕಲು ಪ್ರಾರಂಭಿಸುತ್ತಾರೆ. ಈ ಹುಡುಕಾಟದ ಪ್ರಕ್ರಿಯೆ ವಿಸ್ತಾರಗೊಳ್ಳುತ್ತಾ ಮೂಲ ಉದ್ದೇಶ ಮರೆತು, ಸೋಫಿ ಪಿಯಾನೊಗಳ ಬೆನ್ನೇರಿ ಹೋಗುತ್ತಾರೆ. ಸೈಬೀರಿಯಾ ಪ್ರಾಂತದವಳೇ ಆದ ಆಡ್ಗೆರೆಲ್‌ಳ ಪರಿವಾರ ತಮ್ಮ ಸಹಜ ಅಲೆಮಾರಿ ಕುರುಬತನವನ್ನು ಬಿಟ್ಟು ಒಂದು ಜಾಗದಲ್ಲಿ ಸಮೂಹ ಸಹಕಾರಿ ವ್ಯವಸ್ಥೆಯನ್ನು ಸ್ಥಾಪಿಸಿದ್ದರಂತೆ. ಬೌದ್ಧ ಧರ್ಮವನ್ನು ಇಲ್ಲವಾಗಿಸಿದ ನಿರಂಕುಶತೆಯಿಂದ ದಮನಗೊಂಡಿದ್ದವರಿಗೆ ಸಂಗೀತದಲ್ಲಿ ಒಂದು ನೆಮ್ಮದಿ ಸಿಗುತ್ತಿತ್ತು. ಈ ನೆಮ್ಮದಿಗಾಗಿ ಸೈಬೀರಿಯಾದಲ್ಲಿಯೇ ಪಿಯಾನೊ ಹುಡುಕಬೇಕೆಂದು ಸೋಫಿ ತಮ್ಮ ಯಾತ್ರೆಯನ್ನು ಪ್ರಾರಂಭಿಸುತ್ತಾರೆ. ಇದು ಕಷ್ಟದ ಯಾತ್ರೆ. ಈ ಯಾತ್ರೆಯ ನಂತರ ಏನೂ ದಕ್ಕದಿರಬಹುದು. ಏನಾದರೂ ದಕ್ಕಿದರೆ ಹೇಳಲು ಒಂದು ಕಥೆಯಿರುತ್ತದೆ. ದಕ್ಕದಿದ್ದರೂ ಹೇಳಲು ಮತ್ತೊಂದೇ ಕಥೆಯಿರುತ್ತದೆ. ಹೀಗಾಗಿ, ಪ್ರಯತ್ನಿಸುವುದರಲ್ಲಿ ತಪ್ಪಿಲ್ಲ ಎಂದು ಅವರು ನಿರ್ಧರಿಸುತ್ತಾರೆ. ರಷ್ಯನ್ ಲೇಖಕ ಆಂಟನ್ ಚೆಕಾಫ್ ಸೈಬೀರಿಯಾದಲ್ಲಿ ಕೈಗೊಂಡ ಯಾನವೇ ಸೋಫಿಗೂ ಪ್ರೇರಕವಾಗುತ್ತದೆ.

ಮೊದಲಿಗೆ ಆಡ್ಗೆರೆಲ್‌ಗಾಗಿ ಪಿಯಾನೊ ಹುಡುಕುವ ಕೆಲಸ ಪ್ರಾರಂಭಿಸಿದರೂ, ಅದು ಅನೇಕ ಆಯಾಮಗಳನ್ನು ತೆರೆದಿಡುತ್ತದೆ. ಪಿಯಾನೊ ಯುರೋಪಿನಿಂದ ಬಂದ ವಾದ್ಯ. ಅದು ರಷ್ಯಾ ಮತ್ತು ಸೈಬೀರಿಯಾಕ್ಕೆ ಬಂದ ಕಥೆಯಲ್ಲಿ ಕ್ಯಾಥರೀನ್‌ಳ ಆಧುನಿಕೀಕರಣ ಮತ್ತು ಪಾಶ್ಚಾತ್ಯ ಸಂಸ್ಕೃತಿಯನ್ನು ಅಪ್ಪಿಕೊಳ್ಳುವ ಆಶಯವಿದೆ. ಆದರೆ, ಸೈಬೀರಿಯಾದಲ್ಲಿ ಕೇವಲ ಶಿಕ್ಷೆಯನುಭವಿಸುತ್ತಿರುವವರ ಇಲ್ಲವೇ ಶ್ರಮಜೀವಿಗಳ ಬಿಡಾರವಿದೆ. ಅಂಥ ಜಾಗದಲ್ಲಿ ದೊಡ್ಡ ಗಾತ್ರದ ಪಿಯಾನೊ ಸಿಕ್ಕರೆ ಅದರ ಹಿಂದೆ ಒಂದು ಕಥೆಯಿರಬೇಕು. ಆ ಕಥೆ ಆ ಸಂಸಾರದ ವೈಯಕ್ತಿಕ ಕಥೆಯಲ್ಲದೇ ಆ ಪ್ರಾಂತದ ಚರಿತ್ರೆಯೂ ಆಗುತ್ತದೆ. ಪಿಯಾನೊ ಕೇವಲ ಒಂದು ಭೌತಿಕ ವಸ್ತುವಲ್ಲ. ಅದರ ಹಿಂದೆ ನುಡಿಸುವ ಕಲಾವಿದರಿದ್ದಾರೆ. ತಯಾರಿಸುವ ನಿಪುಣರಿದ್ದಾರೆ. ಶ್ರುತಿ ಮಾಡುವ ತಂತ್ರಜ್ಞರಿದ್ದಾರೆ. ಹೀಗೆ ಅದರ ಹಿಂದೆ ದೊಡ್ಡ ಕಥೆಯೇ ಇರುತ್ತದೆ. ಒಂದು ಪಿಯಾನೊದ ಅನ್ವೇಷಣೆಯಲ್ಲಿ ಅಲ್ಲಿಯ ಚರಿತ್ರೆಯೂ ಅಡಕವಾಗಿದೆ.

ಒಂದು ಪಿಯಾನೊದಿಂದ ಮತ್ತೊಂದು, ಒಂದು ಕಲಾವಿದನಿಂದ ಮತ್ತೊಬ್ಬನಲ್ಲಿಗೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಕಥೆಯಿಂದ ಕಥೆಗೆ – ಹೀಗೆ, ಪುಸ್ತಕದ ನಿರೂಪಣೆ ಸಾಗುತ್ತದೆ. ಒಂದು ಪಿಯಾನೊವನ್ನು ಹಿಡಿದು ಎಷ್ಟು ವಿಸ್ತಾರವಾದ ವಿಶ್ಲೇಷಣೆಯನ್ನು ಕಟ್ಟಬಹುದೆನ್ನುವುದನ್ನು ಸೋಫಿ ತೋರಿಸಿಕೊಡುತ್ತಾರೆ. ಸುಮಾರು ನಾಲ್ಕುನೂರು